ಶ್ರೀ ಎಚ್. ಸಿ. ಬೋರಯ್ಯ.—ಇದು ತುಮಕೂರು ಜಿಲ್ಲೆಗೆ ಸಂಬಂಧಪಟ್ಟ ಪ್ರಶ್ನೆ. ಅಲ್ಲಿ 110 ಪಂಪ್‌ಸೆಟ್‌ಗಳನ್ನು ತೆಗೆದುಕೊಂಡಿದ್ದೇವೆ. ಈಗ ಇರುವ ಕಷ್ಟ ಪೂರೈಸಿದ ಮೇಲೆ ಅವುಗಳನ್ನು ಯಾವ 'ರೀತಿ ವಿಲೇವಾರಿ ಮಾಡಬೇಕು ಎನ್ನುವುದನ್ನು ಮುಂದೆ ಸರ್ಕಾರದವರು ಯೋಚನೆ ಮಾಡುತ್ತಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆಯಿಲ್ ಇಂಜಿನ್‌ಗಳನ್ನು ಕಳುಹಿಸಿದಿರಿ. ಇದಾದ ಎಷ್ಟು ದಿವಸಕ್ಕೆ ಅದಕ್ಕೆ ಬೇಕಾದ ಉಪಕರಣಗಳನ್ನು ತರಿಸಲಾಯಿತು, ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—ಯಾವ ಯಾವ ಜಿಲ್ಲಾಧಿಕಾರಿಗಳು ಹಣ ಬೇಕು ಎಂದು ಅಪೇಕ್ಷೆ ಪಟ್ಟರೋ ಅವರಿಗೆ ಹಣವನ್ನು ಕೊಟ್ಟೆವು. ಆ ಪ್ರಕಾರವಾಗಿ ಅವರು ಇಂಜಿನ್‌ಗಳನ್ನು ತರಿಸಿ ಕೊಂಡಿದ್ದಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಆಯಿಲ್ ಇಂಜಿನ್‌ಗಳು ಬಂದಮೇಲೆ ಅದಕ್ಕೆ ಬೇಕಾದ ಸ್ಪೇರ್ ಪಾರ್ಟ್‌ಗಳು ಬರದೆ ಎರಡು ತಿಂಗಳು ಈ ಯಂತ್ರಗಳು ತಾಲ್ಲೂಕು ಆಫೀಸು ಮತ್ತು ಜಿಲ್ಲಾಧಿಕಾರಿಗಳ ಆಫೀಸು ಮುಂದೆ ಬಿದ್ದಿದ್ದುವು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—ಅಂಥ ಪುಕಾರುಗಳು ಬಹಶಃ ಇಲ್ಲಿಯವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇಂಜಿನ್‌ಗಳು ಯಾವಾಗ ಬಂತು ? ಅದಕ್ಕೆ ಬೇಕಾದ ಸ್ಪೇರ್ ಪಾರ್ಟುಗಳು ಯಾವಾಗ ಬಂತು ಎನ್ನುವುದು ರಿಕಾರ್ಡ್‌ನಲ್ಲಿದೆ. ಈ ಬಗ್ಗೆ ನಾವು ಟೆಲಗ್ರಾಂ ಕೊಟ್ಟು, ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ಕೊಟ್ಟಿದ್ದೇವೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಸಿ. ಬೋರಯ್ಯ.—ಬೆಲ್ಲೆಯಲ್ಲಿ ರಕ್ಷಣೆ ಮಾಡಿರುವ ಬೆಳೆಯನ್ನು ಗಮನದಲ್ಲಿಟ್ಟು ಕೊಳ್ಳುವುದಾದರೆ 120 ಪಂಪ್‌ಸೆಟ್‌ಗಳ ಹಂಚಿಕೆ ಮತ್ತು ಇತರ ಕಾರ್ಯಕ್ರಮಗಳನ್ನು ತೆಗೆದು ಕೊಂಡಿರುವುದನ್ನು ನೋಡಿದರೆ, ಸಾಮಾನುಗಳು ಬರುವುದಕ್ಕೆ ತಡವಾಗಿರಲಾರದು ಎಂದು ತಿಳಿದುಕೊಳ್ಳಬಹುದಾಗಿದೆ.

Sites Allotted to the Charitable and Educational Institutions in Bangalore.

*Q.—288. Smt. NAGARATHNAMMA HIREMATH (Gandhinagar).—Will the Government be pleased to state :—

(*a*) the number of sites allotted to the Charitable and Educational Institutions in Bangalore, since 1962, by the City Improvement Trust Board, Bangalore free of cost, at concessional rates and on stipulated lease basis ;

(*b*) the names of such institutions of various communities to which sites have been allotted by the City Improvement Trust Board free of cost, at concessional rates and on stipulated lease basis ;

(*c*) the names of organisers or Dharmadarshies of the above institutions who have so secured the sites ?

A.—Sri Y. RAMACHANDRA (Deputy Minister for Municipal Administration).—

(*a*) Total number of sites so allotted are 55 in all the Extensions of the Board.

Free of Cost	Nil
Concessional rates	4
Stipulated lease basis	46
Upset price	5

(SRI Y. RAMACHANDR)

(*b*) & (*c*) A detailed list showing the Extensions in which the sites or plots are allotted, Names of the grantees and the lease amounts is placed on the Table of the House. Copy placed in the Mysore Legislature Secretariat Library No. 16. Budget Session dated 28th March 1966. These sites are leased on a long term basis subject to the conditions of the lease.

ಶ್ರೀಮತಿ ನಂಗಮ್ಮ ಹಿರೇಮಠ.—ನಿವೇಶನಗಳ ವಿಲೇವಾರಿ ಮತ್ತು ವಿನ್ಯೋಗ ಇವುಗಳಲ್ಲಿ ತಾರತಮ್ಯ ಇರುವುದಕ್ಕೆ ಕಾರಣವೇನು ? ಅದಕ್ಕೆ ಏನಾದರೂ ತತ್ವ, ನೀತಿ ಇದೆಯೇ ?

ಶ್ರೀ ವೈ. ರಾಮಚಂದ್ರ.—ಇದರಲ್ಲಿ ತಾರತಮ್ಯವೇನೂ ಕಾಣುತ್ತಿಲ್ಲ. ಕನ್‌ಸೆಷನ್ ರೇಟ್, ಸಬ್ಸಿಡೈಸ್‌ಡ್ ಲೀಸ್ ಬೇಸಿಸ್ ಮತ್ತು ಅಪ್‌ಸೆಟ್ ಪ್ರೈಸ್ ಹೀಗೆ ಎಷ್ಟು ಸಂಸ್ಥೆಗಳಿಗೆ ಕೊಡರಾಗಿದೆ ಎನ್ನುವುದನ್ನು ಕೊಟ್ಟಿದ್ದೇವೆ. ಹಿಂದೆ ಸೈಟುಗಳ ವಿಲೇವಾರಿ ಮಾಡುವಾಗ ಒಂದು ಸರಿಯಾದ ನೀತಿ ಇರಲಿಲ್ಲ. ಆದುದರಿಂದ ಸರ್ಕಾರದವರು ಒಂದು ಕಮಿಟಿಯನ್ನು ಮಾಡಿ, ಅದರ ಸಲಹೆಗಳನ್ನು ತೆಗೆದುಕೊಂಡು 16ನೇ ಡಿಸೆಂಬರ್ 1965ರಲ್ಲಿ ಒಂದು ಆರ್ಡ್ಲ್ ಮಾಡಿದೆ. ಅದರ ಪ್ರಕಾರ ವಿದ್ಯಾ ಸಂಸ್ಥೆಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಯಾವ ರೀತಿ ಸೈಟುಗಳನ್ನು ಕೊಡಬೇಕೆಂದು ರೂಲ್ಸ್ ಮಾಡಿರುವ ಪ್ರಕಾರ ಈಗ ವಿಲೇವಾರಿ ನಡೆಯುತ್ತಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಈ ನಿವೇಶನಗಳನ್ನು ಕೊಟ್ಟ ಉದ್ದೇಶ ಸಫಲ ಗೊಂಡಿದೆಯೇ ಇಲ್ಲವೇ ಎಂಬುದನ್ನು ಸರ್ಕಾರದವರು ನೋಡುತ್ತಾರೆಯೇ ?

ಶ್ರೀ ವೈ. ರಾಮಚಂದ್ರ.—ನಾವು ಕಂಡೀಷನ್ಸ್ ಹಾಕಿ ಏನು ಉದ್ದೇಶಕ್ಕೆ ಅವನ್ನು ಕೊಡುತ್ತೇವೋ ಅದಕ್ಕೇ ಉಪಯೋಗಿಸಬೇಕು. ಬೇರೆ ರೀತಿಯಲ್ಲಿ ಅದನ್ನು ಉಪಯೋಗಿಸಬಾರದು ಎಂಬುದಾಗಿ ಕಂಡೀಷನ್ ಇದೆ. ಟ್ರಸ್ಟ್ ಬೋರ್ಡಿನ ಚೇರ್‌ಮನ್ ಅವರು ಸದಸ್ಯರಾಗಿರಬೇಕೆಂದು ಹೇಳಿದ್ದೇವೆ. ಹಾಗಿಲ್ಲದಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ಈಗ ಕೊಟ್ಟಿರುವ ನಿವೇಶನಗಳ ಪೈಕಿ ಒಂದನ್ನು ಮಾತ್ರ ಒಬ್ಬ ಖಾನಗಿ ಮನುಷ್ಯನಿಗೆ ಕೊಡುವುದಕ್ಕೆ ಕಾರಣವೇನು ? ನಥೆಯ ಮುಂದೆ ಮಂಡಿಸಿದ ಪಟ್ಟಿಯ ಸೀರಿಯರ್ ನಂಬರ್ 7ರಲ್ಲಿ ರಾಜಾಜಿನಗರದ ಶ್ರೀ ಪರ್ಗಿಸ್ ಎಂಬುವರಿಗೆ ಕೊಟ್ಟಿದೆ ಎಂದು ತಿಳಿಸಿದೆ. ಆರೀತಿ ಕೊಡುವುದಕ್ಕೆ ಕಾರಣವೇನು ?

ಶ್ರೀ ವೈ. ರಾಮಚಂದ್ರ.—ಅವರು ಹೋಮಿಯೋಪತಿ. ಮೆಡಿಸನ್ಸ್ ಕೊಡುತ್ತಿದ್ದಾರೆ. ಅವರಿಂದ ಸಾರ್ವಜನಿಕರ ಯೋಗಕ್ಷೇಮವಾಗುತ್ತಿರುವುದರಿಂದ ಸಾರ್ವಜನಿಕರ ಉಪಯೋಗ ಕ್ಕೋಸ್ಕರವಾಗಿ ಅವರಿಗೆ ಕೊಟ್ಟಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ.—ಹಾಗಾದರೆ ಸರ್ಕಾರದವರು ಉಚಿತವಾಗಿ ಔಷಧಿಗಳನ್ನು ಕೊಡತಕ್ಕ ಪ್ರೈವೇಟ್ ಪ್ರ್ಯಾಕ್ಟೀಷನರ್ಸ್‌ಗೆ ಎಲ್ಲರಿಗೂ ಆ ರೀತಿ ನಿವೇಶನಗಳನ್ನು ಕೊಡುತ್ತಾರೆಯೇ ?

ಶ್ರೀ ವೈ. ರಾಮಚಂದ್ರ.—ಕಂಡೀಷನ್ಸ್‌ಗೊಳಪಟ್ಟರೆ ಕೊಡುತ್ತೇವೆ.

ಶ್ರೀಮತಿ ನಾಗರತ್ನಮ್ಮ ಹಿರೇ ಮಠ.—99ವರ್ಷಗಳವರೆಗೆ ಈಗ ಲೀಜ್ ಕೊಡಲಿಕ್ಕೆ ಕಾನೂನಿದೆಯೇ ?

ಶ್ರೀ ವೈ. ರಾಮಚಂದ್ರ.—99ವರ್ಷಗಳು ಸಾಮಾನ್ಯವಾಗಿ ಕೊಡುತ್ತೇವೆ. ಪೂರ್ತಿಯಾಗಿ 100ವರ್ಷಗಳು ಲೀಜ್‌ಗೆ ಕೊಡುವುದಕ್ಕೆ ಆಗುವುದಿಲ್ಲ. ಹಾಗೆ ಕೊಟ್ಟರೆ ಆಮೇಲೆ ಅವರಿಗೆ perpetual ಆಗುತ್ತದೆ. ಮೊದಲು ಕಾನೂನು ಪ್ರಕಾರ 30 ವರ್ಷಗಳೆಂದು ಕೊಡುತ್ತೇವೆ. ಅನಂತರ 69ವರ್ಷಗಳು ಎಂದು ರೂಲ್ಸ್ ಪ್ರಕಾರ ಮಾಡಿದ್ದೇವೆ.

ಶ್ರೀ ಕೆ. ಎ. ಬೈರೇಗೌಡ.— ಟ್ರಸ್ಟ್‌ಬೋರ್ಡಿನವರು ಕೆಲವು ಧಾರ್ಮಿಕ ಸಂಸ್ಥೆಗಳಿಗೆ ನಿವೇಶನ ಗಳನ್ನು ಉಚಿತವಾಗಿ ಕೊಡುವಾಗ ಆ ಸಂಸ್ಥೆಗಳು ಅವನ್ನು ತೆಗೆದುಕೊಂಡ ಉದ್ದೇಶವನ್ನು ಕಾರ್ಯರೂಪಕ್ಕೆ ತರದೇ ಹೋದರೆ ಪುನಃ ಟ್ರಸ್ಟ್ ಬೋರ್ಡಿನವರು ಅವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ವೈ. ರಾಮಚಂದ್ರ.—ನದನ್ಯರಿಗೆ ಒದಗಿಸಿರತಕ್ಕ ಉತ್ತರದಲ್ಲಿ free of cost ಆಗಿ ಯಾರಿಗೂ ಕೊಟ್ಟಿಲ್ಲವೆಂದು ಹೇಳಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಸರ್ಕಾರದವರು ಕೆಲವು ಸಂಸ್ಥೆಗಳಿಗೆ ನಿವೇಶನಗಳನ್ನು ಕೊಟ್ಟಿದ್ದಾರೆಂದು ಹೇಳಿದ್ದಾರೆ. ನಥೆಯಮುಂದೆ ಕೊಟ್ಟಿರತಕ್ಕ ಪಟ್ಟಿಯಲ್ಲಿ ರಾಜಾಜಿನಗರದ ಬನವೇಶ್ವರ ಸಹಕಾರ ಸಂಘದವರು ಸುಮಾರು ಆರು ವರ್ಷಗಳಿಂದಲೂ ಒಂದು ನಿವೇಶನಕ್ಕಾಗಿ ಕೇಳುತ್ತಿದ್ದಾರೆಂಬುದು ವ್ಯಕ್ತವಾಗುತ್ತದೆ. ಇದುವರೆಗೂ ಅವರಿಗೆ ಕೊಡಲಿಲ್ಲ. ಕಾರಣವೇನು ?

ಶ್ರೀ ವೈ. ರಾಮಚಂದ್ರ.—ಅವರಿಗೆ ಇನ್ನೂ ಕೊಡದಿದ್ದರೆ ಒಂದು ನಿವೇಶವನ್ನು ಅವರಿಗೆ ಕೊಡಿಸಿಲಕ್ಕೆ ಪ್ರಯತ್ನ ಮಾಡುತ್ತೇವೆ. ಕೆಲವು ಕಂಡೀಷನ್ಸ್ ಕೇಳಿದ್ದೇವೆ. ಅವಿನ್ನೂ fulfil ಆಗಿಲ್ಲ.

Flood havocs in Shanthisagar valley in Channagiri taluk.

* *Q.*—324 **Sri KUNDUR RUDRAPPA** (Channagiri).—

Will the Government be pleased to state.—

(*a*) the measures taken to redress the grievances of the people of low lying lands affected by the flood havocs in Shanthisagar valley in Channagiri taluk and the amount spent in this behalf in fulfilment of the assurances given by the Government.

(*b*) whether they are aware of the frequent spillage over the Shanthisagara wasteweir and the damages caused to crops thereby ?

A.—**Sri S. NIJALINGAPPA** (Chief Minister).—

(*a*) This is under investigation by the Executive Engineer M. I. I. Dn. Shimoga.

(*b*) It is not frequent.

ಶ್ರೀ ಕುಂದೂರು ರುದ್ರಪ್ಪ.—ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರ ಕಣಿವೆ 43 ಚದುರಮೈಲಿಗಳಿವೆ. ಅಲ್ಲಿ ಪ್ರತಿವರ್ಷವೂ ಕೂಡ ಪ್ರವಾಹದ ಹಾವಳಿಯಿಂದಾಗಿ ಅಲ್ಲಿನ ಕೆರೆಗಳೆಲ್ಲಾ ತುಂಬಿ ಹೋಗಿ ಮಳೆಗಾಲದಲ್ಲಿ ನುತ್ತು ಮುತ್ತಲರುವ ಗ್ರಾಮಗಳಿಗೆರ್ಲಾ ವಿಶೇಷವಾಗಿ ಹಾನಿಯಾಗುತ್ತದೆಂಬುದು ಮನವರಿಕೆಯಾಗಿರಬಹುದು. ಆದರೆ ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರ ಎಗ್ಸಿಕ್ಯುಟಿವ್ ಇಂಜನಿಯರ್ ಅವರ ಪರಿಶೀಲನೆಯಲ್ಲಿದೆ ಎಂದು ಈಗ ಹೇಳಿದ್ದಾರೆ. ಅದಕ್ಕೆ ಉತ್ತರವನ್ನು ಇನ್ನೂ ವಿವರವಾಗಿ ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಶಾಂತಿಸಾಗರದ ಕೋಡಿಯ ಮೇಲ್ಭಾಗದಲ್ಲಿ ಪದೇಪದೇ ಪ್ರತಿ ವರ್ಷವೂ ನೀರು ಹರಿಯುತ್ತಿರುವುದು ಮತ್ತು ನಾಲ್ಕೈದು ವರ್ಷಗಳಿಗೊಂದು ಸಾರಿ ಕೋಡಿ ಉಕ್ಕಿ ಹರಿದು ಅದರಿಂದಾಗಿ ಬೆಳೆಗಳಿಗೆ ಲುಕ್ಸಾನು ಆಗಿರುವುದು ನಿಜ. 1956ರಲ್ಲಿ ಆ ಕೋಡಿಯ ಮೇಲೆ ನಾಲ್ಕೈದು ಇಂಚುಗಳಷ್ಟು ಜಾಸ್ತಿಯಾಗಿ ನೀರು ಹರಿದು ವಿಶೇಷವಾಗಿ ಬೆಳೆಗೆ ತೊಂದರೆಯಾಗಿರುವುದು ಸರ್ಕಾರಕ್ಕೆ ಮನವರಿಕೆಯಾಗಿದೆ. ಮೇಲ್ಭಾಡೆ ಶಾಂತಿಸಾಗರಕ್ಕೆ ಬರತಕ್ಕ ಹಿರೇಹಳ್ಳ ಎಂಬ ಸ್ಥಳದಲ್ಲಿ ಪ್ರವಾಹದ ಹಾವಳಿಯನ್ನು ತಪ್ಪಿಸುವುದಕ್ಕೋಸ್ಕರ ಮೇಲ್ಭಾಡೆ ಹೊಸದುರ್ಗ ತಾಲ್ಲೂಕಿಗೆ ಸೇರಿದಲ್ಲಿ ಒಂದೆರಡು ಕೆರೆಗಳನ್ನು ಕಟ್ಟಲು ಸುಮಾರು 29 ಲಕ್ಷ ರೂಪಾಯಿಗಳನ್ನು ಖರ್ಚುಮಾಡತಕ್ಕ ಒಂದು ಅಂದಾಜು ಯೋಜನೆ ನಡೆಯುತ್ತಿದೆ. ಅದಕ್ಕೆ ಬೇಕಾಗತಕ್ಕ ಅಂದಾಜು, ಪ್ಲಾನುಗಳು ಸಿದ್ಧವಾಗುತ್ತಿವೆ. ಅದು ಕಾರ್ಯರೂಪಕ್ಕೆ ಬಂದರೆ ಆ ಒಂದು ಕಷ್ಟ ತಪ್ಪೀತು. ಆದ್ದರಿಂದ ಇಲ್ಲಿ ಈ ಶಾಂತಿ ಸಾಗರದ ಕೋಡಿಯನ್ನು ಸರಿಮಾಡುವುದಕ್ಕೆ ಸುಮಾರು 12 ಲಕ್ಷ ರೂಪಾಯಿಗಳ ಒಂದು ಅಂದಾಜು ತಯಾರಾಗಿದೆ. ಆ ವಿಚಾರ ಸರ್ಕಾರದ ಗಮನದಲ್ಲಿದೆ.